ಆಡುವ ಮಾತು, ಮಾಡುವ ಕೆಲಸ ಒಂದೇ ಆಗುವುದಾದರೆ, ಆಗ ಹಣವು ತನ್ನಷ್ಟಕ್ಕೆ ತಾನೇ ನೀರಿನಂತೆ ನಿಮ್ಮ ಹತ್ತಿರ ಸುರಿಯುವುದು (ಸ್ವಾ.ವಿ. ಕೃತಿಶ್ರೇಣಿ, ಸಂ.೮, ಪು.೧೪). ಶಾಲೆಯ ಯಶಸ್ಸಿನ ಕುರಿತು ಬಂಗಾಳಿ, ಇಂಗ್ಲೀಷ್ ವರ್ತಮಾನ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿದ್ದವು. ಕೊಲ್ಕತ್ತಾದ ಅನೇಕ ಪ್ರದೇಶಗಳಲ್ಲಿ ಜನ ತಾವೇ ಸ್ವತಃ ಮಹಾಕಾಳೀ ಪಾಠಶಾಲೆಯ ಶಾಖೆಗಳನ್ನು ತೆರೆಯತೊಡಗಿದರು. ಮಾತಾಜಿಯ ದೇಹಾಂತ್ಯದ ವೇಳೆಗೆ ೧೬ ಶಾಖೆಗಳು ಹಾಗೂ ಮುಖ್ಯಶಾಲೆಯ ವಿದ್ಯಾರ್ಥಿನಿಯರ ಸಂಖ್ಯೆ ೫೦೦ಕ್ಕೆ ಮುಟ್ಟಿತು. ಶಾಖೆಗಳಿಂದ ವ್ಯತಿರಿಕ್ತವಾಗಿ ಗುರುತಿಸಲು ಅದನ್ನು 'ಆದಿ ಮಹಾಕಾಳಿ ಪಾಠಶಾಲೆ' ಎಂದು ನಾಮಕರಣ ಮಾಡಲಾಯಿತು. ''ಸ್ತ್ರೀಯರು ತಮ್ಮ ರೀತಿಯಲ್ಲಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ನಾವು ಅವರನ್ನು ಇಡಬೇಕು. ಇತರರು ಯಾರೂ ಅವರಿಗೆ ಇವನ್ನು ಮಾಡಲಾರರು, ಮಾಡಕೂಡದು. ನಮ್ಮ ಭಾರತೀಯ ಸ್ತ್ರೀಯರು ಜಗತ್ತಿನ ಇತರ ಹೆಂಗಸರಷ್ಟೇ ಇದನ್ನು ಸಾಧಿಸಲು ಸಮರ್ಥರು.'' (ಕೃತಿಶ್ರೇಣಿ, ಸಂ. ೭, ಪು. ೪೫೧)

ಮಕ್ಕಳಲ್ಲಿ ಭಗವತಿಯನ್ನೇ ಕಾಣುತ್ತಿದ್ದ ಮಾತಾಜಿ, ಅವರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ ಪರಿ ನಿಜಕ್ಕೂ ಶ್ಲಾಘನೀಯ. ಶಾಲೆಯಲ್ಲಿ ಸಂಸ್ಕೃತ, ಬಂಗಾಳಿ ಭಾಷೆ, ಲೆಕ್ಕ, ಅಡಿಗೆ, ಹೊಲಿಗೆ, ಕಸೂತಿ, ಚಿತ್ರಕಲೆ ಮುಂತಾದವುಗಳನ್ನು ಹೇಳಿಕೊಡಲಾಗುತ್ತಿತ್ತು. ಅಷ್ಟೇ ಅಲ್ಲದೆ ಹೆಣ್ಣುಮಕ್ಕಳಿಗೆ ಹಿಂದೂ ಸಂಸ್ಕೃತಿಯ ಆವಶ್ಯಕತೆಯನ್ನು ಅರಿತು ಸರಸ್ವತೀಪೂಜೆ, ಶಿವಪೂಜೆ, ವೇದಮಂತ್ರಗಳ ಪಠನ ಮುಂತಾದವುಗಳಲ್ಲೂ ತರಬೇತಿ ನೀಡಲಾಯಿತು. ಗಂಡುಮಕ್ಕಳಂತೆ ಹೆಣ್ಣುಮಕ್ಕಳಿಗೂ ರಕ್ಷಣೆ ಮತ್ತು ವಿದ್ಯಾಭ್ಯಾಸ ನೀಡಬೇಕು ಎಂಬುದೇ ಮಾತಾಜಿಯ ಗುರಿ. ವೈಶಾಖ ಮಾಸದಲ್ಲಿ ನಿತ್ಯವೂ ೫೦೦ ಜನ ಪುಟ್ಟ ಹೆಣ್ಣುಮಕ್ಕಳು ಸಂಸ್ಕೃತ ಮಂತ್ರಗಳನ್ನು ಉಚ್ಚರಿಸುತ್ತ ಶಾಲೆಯ ಆವರಣದಲ್ಲಿ ಶಿವಪೂಜೆ ಮಾಡುವುದನ್ನು ನೋಡಲು ಇಂಗ್ಲಿಷ್ ಅಧಿಕಾರಿಗಳು, ಅವರ ಪತ್ನಿಯರು, ಪಾರ್ಸಿ ಹೆಂಗಸರು, ಶ್ರೀಮಂತ ಬಡವರೆನ್ನದೆ ಜನ ಗುಂಪು ಗುಂಪಾಗಿ ನಿಂತು ವೀಕ್ಷಿಸುತ್ತಿದ್ದರು, ಮಧ್ಯಾಹ್ನದ ವೇಳೆಗೆ ಮಕ್ಕಳೂ ಸೇರಿದಂತೆ ೧೦೦ ಮಂದಿಗೆ ಪ್ರಸಾದ ವಿತರಣೆ, ೧೨೦ ಲೀಟರ್ ಹಾಲಿನಲ್ಲಿ ಪಾಯಸದಡಿಗೆ ತಯಾರಾಗುತ್ತಿತ್ತು. ಹೀಗೆ ಸರಸ್ವತಿ ಪೂಜೆ, ದುರ್ಗಾಪೂಜೆ, ಗುರುಪೂರ್ಣಿಮಾ, ಎಲ್ಲವೂ ವೈಭವೋಪೇತವಾಗಿ ನಡೆಯುತ್ತಿತ್ತು. ಆಮಂತ್ರಣದ ಮೇರೆಗೆ ಬರ್ದವಾನ್ ಹಾಗೂ ಬರೋಡಾ ರಾಜರು, ಬಾಲಗಂಗಾಧರ ತಿಲಕ್ ಮುಂತಾದವರು ಭೇಟಿ ನೀಡುತ್ತಿದ್ದರು. ಒಮ್ಮೆ ಸಿಸ್ಟರ್ ನಿವೇದಿತಾ ಸಹ ಭೇಟಿ ನೀಡಿದ್ದರು. ಪೂಜೆ, ಹಬ್ಬ ಇತರ ಚಟುವಟಿಕೆಗಳ ನಡುವೆಯೂ ಮಕ್ಕಳು ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸುತ್ತಿದ್ದದ್ದು ಶಾಲೆಯ ಹೆಚ್ಚುಗಾರಿಕೆಯಾಗಿತ್ತು. ಶಾಲೆ ತೆರೆಯುವುದು, ಮುಚ್ಚುವುದು ಎಲ್ಲವೂ ಪಂಚಾಂಗದನುಸಾರ!

ರಾಜಮನೆತನದ ಕುವರಿಯಾದರೂ ಮಾತಾಜಿ ಪ್ರಾತಃಕಾಲ ನಾಲ್ಕು ಗಂಟೆಗೆ ಎದ್ದು ಸ್ನಾನ, ಪೂಜೆ, ಜಪತಪಾದಿಗಳನ್ನು ಮುಗಿಸಿ ಒಂಬತ್ತು ಗಂಟೆಗೇ ಶಾಲೆಯಲ್ಲಿನ ಗೋಸಂಪತ್ತಿನ ಮೇಲ್ವಿಚಾರಣೆಗೆ ಹೋಗುತ್ತಿದ್ದರು. ಕೆಲವೊಮ್ಮೆ ತಾವೇ ಕೈಯಾರೆ ಅವುಗಳಿಗೆ ತಿನಿಸುತ್ತಿದ್ದರು. ನಂತರ ತಮ್ಮ ಮುದ್ದಿನ ಪ್ರಾಣಿಗಳಾದ ಜಿಂಕೆ, ಗಿಣಿಗಳೊಡನೆ ಮಾತುಕತೆ, ಶಾಲೆಯ ಉಸ್ತುವಾರಿ, ಲೆಕ್ಕಪತ್ರ ನೋಡುವುದು, ಇತ್ಯಾದಿಗಳಲ್ಲಿ ರಾತ್ರಿ ಒಂಬತ್ತು ಗಂಟೆಯೇ ಆಗುತ್ತಿತ್ತು. ಅದೇ ಸಮಯದಲ್ಲಿ ಭಕ್ತರು ಸೇರುತ್ತಿದ್ದರು. ರಾಮಾಯಣದ ವಾಚನವಾಗುತ್ತಿತ್ತು. ಸಾಧುಗಳು, ಯೋಗಿಗಳು, ಭಕ್ತರು, ಇಂಗ್ಲೀಷ್ ವೈಸ್‌ರಾಯರು, ಗವರ್ನರ್‌ಗಳು ಬಡವಬಲ್ಲಿದರೆನ್ನದೆ ಎಲ್ಲರ ಮೆಚ್ಚುಗೆ, ಗೌರವಕ್ಕೆ ಪಾತ್ರರಾಗಿದ್ದ ಮಾತಾಜಿಯ ಮನೆಯೇ ತೀರ್ಥಸ್ಥಳವೆನಿಸಿತು. 'ಯಾರು ಪರರಿಗಾಗಿ ತನ್ನ ಪ್ರಾಣವನ್ನರ್ಪಿಸಲು ಸಿದ್ಧನಾಗಿರುವನೋ ಆತನ ಮುಂದೆ ಒಟ್ಟು ಲೋಕವೇ ಪೂಜ್ಯಭಾವದಿಂದಲೂ, ಭಯದಿಂದಲೂ ನಿಲ್ಲುತ್ತದೆ.' *(ಕೃತಿಶ್ರೇಣಿ, ಸಂ.೧, ಪು.೯೦)* ೧೫ನೇ ಮಾರ್ಚ್ ೧೯೦೬ರಂದು ಮಾತಾಜಿ ಶಾಲೆಯ ಆಡಳಿತವನ್ನು ಟ್ರಸ್ಟಿಗೆ ವರ್ಗಾಯಿಸಿ ದರ್ಭಾಂಗದ ಮಹಾರಾಜರನ್ನು ಅಧ್ಯಕ್ಷರನ್ನಾಗಿ ನೇಮಿಸುವುದರ ಮೂಲಕ ತಮ್ಮ ಅಂತ್ಯಕಾಲ ಸಮೀಪಿಸುತ್ತಿದೆಯೆಂಬ ಸೂಚನೆಯಿತ್ತರೆ? ಭಗವಂತನಿಂದ ಕಳುಹಿಸಲ್ಪಟ್ಟ ದೇವದೂತೆಯು ೨೦ನೇ ಏಪ್ರಿಲ್ ೧೯೦೭ ರಂದು ವಾರಣಾಸಿಯಲ್ಲಿ ಭಗವಂತನ್ನೇ ಸೇರಿದಳು.

''ಯಾರು ಇತರರಿಗಾಗಿ ಜೀವಿಸುವರೋ ಅವರು ಮಾತ್ರ ಬದುಕಿದ್ದಂತೆ, ಇತರರು ಬದುಕಿದ್ದರೂ ಸತ್ತಂತೆ ''

– ಸ್ವಾಮಿ ವಿವೇಕಾನಂದ.

***(ಆಧಾರ: 'Tapasvini Mataji Ganga Bai', Ramakrishna Sarada Mission, Dakshineswar, Kolkata-76 )*** ✷

ಹಿಂದೂ ನಾರಿಯರುಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಯವರು. ಬಹುಶಃ ಪ್ರಪಂಚದ ಇತರ ನಾರಿಯರಿಗಿಂತ ಹೆಚ್ಚು ಎಂದು ಬೇಕಾದರೆ ಹೇಳಬಹುದು. ಸ್ತ್ರೀತ್ವದ ಪೂರ್ಣ ಭಾವನೆಯೆಂದರೆ ಪೂರ್ಣ ಸ್ವಾತಂತ್ರ್ಯ.

ನಮ್ಮ ಸ್ತ್ರೀಯರು ಹೆಚ್ಚು ವಿದ್ಯಾವಂತರಲ್ಲ. ಆದರೆ ಅವರು ಹೆಚ್ಚು ಪರಿಶುದ್ಧರು. ಸ್ತ್ರೀಗೆ ತನ್ನ ಗಂಡನಲ್ಲದವರೆಲ್ಲಾ ಮಕ್ಕಳಂತೆ ಇರಬೇಕು. ಪ್ರತಿಯೊಂದು ಪುರುಷನಿಗೂ ತನ್ನ ಹೆಂಡತಿಯಲ್ಲದೆ ಉಳಿದ ಸ್ತ್ರೀಯರೆಲ್ಲ ತನ್ನ ತಾಯಿಯಂತೆ ಇರಬೇಕು.

***– ಸ್ವಾಮಿ ವಿವೇಕಾನಂದ***



# ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು

ಡಾ. ಕೆ. ಅನಂತರಾಮು

## ನೀವು ನಿಜವಾಗಿ ಪ್ರಾರ್ಥನೆ ಮಾಡುತ್ತಿಲ್ಲ

ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಗುರುನಾನಕ್ ಅವರ ಹೆಸರು (೧೪೬೯–೧೫೩೮) ಚಿರಸ್ಮರಣೀಯವಾದುದು. ಸನಾತನ ಧರ್ಮದ ಸಂರಕ್ಷಣೆಗಾಗಿ ಸಿಖ್ ಎಂಬ ಹೊಸದೊಂದು ಪಂಥವನ್ನೇ ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇಂದಿನ ಪಾಕಿಸ್ತಾನಕ್ಕೆ ಸೇರಿದ ಪಂಜಾಬು ಪ್ರಾಂತದ ತಲವಂಡಿ ಎಂಬಲ್ಲಿ ಅವರು ಉದಿಸಿದರು. ಸುಲ್ತಾನಪುರ ಎಂಬುದು ನಾನಕರ ಆಧ್ಯಾತ್ಮಿಕ ಸಾಧನೆಯ ರಂಗಸ್ಥಳ. ಅಲ್ಲಿಯೇ ಅವರು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡರು.

ಭಕ್ತಿಯ ಬಾಹ್ಯರೂಪಗಳಲ್ಲಿ ಪ್ರತೀಕೋಪಾಸನೆ, ಇಷ್ಟದೈವ ದಲ್ಲಿ ನಿಷ್ಠೆ , ನಾಮಜಪ – ಮುಂತಾದ ಎಲ್ಲವೂ ಸೇರ್ಪಡೆ ಯಾಗುತ್ತವೆ. ಅವು ನಮ್ಮಲ್ಲಿ ಶಾಶ್ವತಶಕ್ತಿಯು ಜಾಗೃತವಾಗುವು ದಕ್ಕೆ ಇರುವ ಪೂರ್ವಸಿದ್ಧತೆಗಳು. ಈ ಎಲ್ಲ ವಿಧಿ ನಿಯಮಗಳನ್ನು ಮೀರಿಹೋದ ಮೇಲೆ ನಿಜವಾದ ಆಧ್ಯಾತ್ಮಿಕತೆ ಉದಿಸುತ್ತದೆ. ಆಗ ಈ ಬಾಹ್ಯರೂಪದ ನಿಯಮಗಳೆಲ್ಲ ಕಳಚಿ ಬೀಳುತ್ತವೆ. ಎಲ್ಲ ರೂಪಗಳೂ ಮಾಯವಾಗುತ್ತವೆ. ದೇವಸ್ಥಾನ, ಚರ್ಚು ಮುಂತಾದವೆಲ್ಲ ನಮ್ಮೊಳಗೇ ಉರುಳಿ ಮಣ್ಣು ಪಾಲಾಗುತ್ತವೆ. ಒಂದು ನಿಶ್ಚಿತ ಧಾರ್ಮಿಕ ಪಂಥದಲ್ಲಿ ಹುಟ್ಟುವುದೇನೋ ಸರಿಯೆ, ಎಲ್ಲಿ ಹುಟ್ಟಬೇಕೆಂಬುದೇನೂ ನಮ್ಮ ಕೈಲಿಲ್ಲ. ಆದರೆ ಅದರಿಂದ ಹೊರಬರದೆ, ವಿಶಾಲವಾದ ವಿಚಾರಧಾರೆಗೆ ನಮ್ಮನ್ನು ತೆರೆದುಕೊಳ್ಳದೆ, ಮತೀಯ ಭಾವನೆಗಳೊಂದಿಗೇ ಸಾಯುವುದು ಮಾತ್ರ ಅತ್ಯಂತ ಶೋಚನೀಯವಾದುದು.

ದೇವಸ್ಥಾನಗಳಲ್ಲಾಗಲಿ, ಚರ್ಚುಗಳಲ್ಲಾಗಲಿ ಕೈ ಮುಗಿ ಯುವುದು, ಕಣ್ಣುಮುಚ್ಚಿಕೊಳ್ಳುವುದು, ಸಾಷ್ಟಾಂಗವೆರಗು ವುದು, ಮಂಡಿಯೂರುವುದು – ಮುಂತಾದ ಎಲ್ಲವೂ ಕವಾ ಯತಿನಂತೆ ಯಾಂತ್ರಿಕವಾಗಿ ನಡೆಯುತ್ತದೆ. ಮನಸ್ಸು ಮಾತ್ರ ಬೇರೆಲ್ಲಿಯೋ ಇರುತ್ತದೆ. ಇದಾವುದೂ ನಿಜವಾದ ಧರ್ಮ ವಲ್ಲ. ಬಾಹ್ಯವಾದ ಒಂದು ಆಚರಣೆಯಲ್ಲಿಯೇ ನಮಗೆ ಮನಸ್ಸು ನೆಡಲಿಲ್ಲವೆಂದಮೇಲೆ, ಅದರಿಂದ ಮುಕ್ತರಾಗಿ ಮೇಲೆ ಹೊರಬರುವುದೆಂತು! ಈ ವಿಚಾರಗಳನ್ನು ಹೇಳುವಾಗ ಸ್ವಾಮಿ ವಿವೇಕಾನಂದರು ಗುರುನಾನಕರ ಬದುಕಿನಲ್ಲಿ ನಡೆದ ಘಟನೆಯೊಂದನ್ನು ನಿರೂಪಿಸಿದ್ದಾರೆ.

ಗುರುನಾನಕರು ಸುಲ್ತಾನಪುರದಲ್ಲಿ ಆತ್ಮಸಾಕ್ಷಾತ್ಕಾರ ಮಾಡಿ ಕೊಂಡ ನಂತರ ದಿವ್ಯಪ್ರಭೆಯಿಂದ ಬೆಳಗುತ್ತಿದ್ದರು. ಆ ಹೊತ್ತಿ ನಲ್ಲಿ ಸುಲ್ತಾನಪುರದಲ್ಲಿ ದೌಲತ್‌ಖಾನ್ ಎಂಬ ನವಾಬನು ರಾಜ್ಯವಾಳುತ್ತಿದ್ದನು. 'ನಾನು ಇಲ್ಲಿ ಕಾಣುತ್ತಿರುವುದು ಹಿಂದು ವನ್ನೂ ಅಲ್ಲ, ಮುಸಲ್ಮಾನನನ್ನೂ ಅಲ್ಲ, ಕೇವಲ ಮನುಷ್ಯನನ್ನು ಮಾತ್ರ' ಎಂದು ನಾನಕರು ಸಾಕ್ಷಾತ್ಕಾರದ ನಂತರ ದಿವ್ಯವಾದ ವಾಣಿಯನ್ನೇ ನುಡಿದರು. ಸಣ್ಣದೊಂದು ಟೀಕೆಯನ್ನೂ ಸಹಿಸದ ಆ ಜನರು, ನಾನಕರ ಮಾತಿನಿಂದ ಸಿಟ್ಟುಗೊಂಡು ನವಾಬನಿಗೆ ದೂರಿತ್ತರು. ನವಾಬನು ನಾನಕರನ್ನು ಬರಮಾಡಿ ವಿಚಾರಣೆಗೆ ಗುರಿಪಡಿಸಿದನು. ಆ ಹೊತ್ತಿನಲ್ಲಿ ಮಸೀದಿಯ ಒಬ್ಬ ಮುಲ್ಲಾನೂ ಅಲ್ಲಿದ್ದನು. ನವಾಬನು, ''ನೀನು ಇಲ್ಲಿ ಕಾಣುತ್ತಿರುವ ಮುಸಲ್ಮಾನರು ನಿನಗೆ ಮುಸಲ್ಮಾನರಲ್ಲ ಎಂದಾ ದರೆ, ನಿಜವಾದ ಮುಸಲ್ಮಾನರು ಯಾರೆಂದು ಹೇಳು'' ಎಂದು ಗದರಿದನು. ನಾನಕರು ಸ್ವಲ್ಪವೂ ವಿಚಲಿತರಾಗದೆ, ''ಮುಸಲ್ಮಾನ ರೆಂದು ಕರೆಸಿಕೊಳ್ಳುವುದು ಸುಲಭ, ಆದರೆ ಮುಸಲ್ಮಾನರಾಗು ವುದು ಕಡುಕಷ್ಟ. ಯಾರಿಗೆ ಕರುಣೆಯೇ ಮಸೀದಿಯೋ, ಶ್ರದ್ಧೆಯೇ ಪ್ರಾರ್ಥನೆಯೋ, ಪ್ರಾಮಾಣಿಕ ಜೀವನವೇ ಪವಿತ್ರ ಕುರಾನೋ, ಸಂಯಮವೇ ಉಪವಾಸವೋ, ಅವನೇ ನಿಜ ವಾದ ಮುಸಲ್ಮಾನ''ಎಂದು ಘಂಟಾಘೋಷವಾಗಿ ಹೇಳಿದರು.

ಆಗ ಅಲ್ಲಿದ್ದ ಖಾಜಿಗೆ ನಾನಕರ ಮಾತಿನಿಂದ ಅಸಮಾ ಧಾನವೇ ಹೆಚ್ಚಿತು. ''ನೀನು ಇಷ್ಟೆಲ್ಲ ಮಾತನಾಡುತ್ತೀಯಲ್ಲ, ನಿಜವಾಗಿಯೂ ನಿನಗೆ ಮುಸ್ಲಿಂ ಧರ್ಮದಲ್ಲಿ ನಂಬಿಕೆಯಿದ್ದರೆ ನಮ್ಮೊಡನೆ ಮಸೀದಿಗೆ ಬಂದು ಪ್ರಾರ್ಥನೆ ಮಾಡುತ್ತೀಯಾ?'' ಎಂದು ಸವಾಲು ಎಸೆದನು. ಆಗಲೂ ನಾನಕರು, ''ಓಹೋ ಆಗಲಿ, ಅದಕ್ಕೇನಂತೆ, ಭಗವಂತನ ಪ್ರಾರ್ಥನೆಗೆ ಮಸೀದಿ ಯಾದರೇನು, ದೇವಾಲಯವಾದರೇನು'' ಎಂದು ದೃಢ ವಾಗಿಯೇ ಹೇಳಿದರು. ಎಲ್ಲರೂ ಮಸೀದಿಯನ್ನು ಹೊಕ್ಕರು. ಆಗಲೇ ಅಲ್ಲಿ ಭಕ್ತರು ಪ್ರಾರ್ಥನೆಗೆಂದು ಸಾಲಾಗಿ ನಿಂತಿದ್ದರು. ಪ್ರಾರ್ಥನೆ ಪ್ರಾರಂಭವಾಯಿತು. ನೆಲಕ್ಕೆ ಬಾಗುವುದು, ನಮಿಸು ವುದು, ಮೇಲೇಳುವುದು, ಬಾಯಲ್ಲಿ ದೇವರ ಮಾತುಗಳನ್ನು ಉಚ್ಚರಿಸುವುದು ಮುಂತಾದವು ಸಾಂಗವಾಗಿಯೇ ನಡೆದವು. ನಾನಕರು ಮಾತ್ರ ಪ್ರಾರ್ಥನೆ ಮಾಡುವವರ ಗುಂಪಿಗೆ ಸೇರದೆ,

ಅವರು ಮಾಡುವುದನ್ನೆಲ್ಲ ನೋಡುತ್ತ, ನಸುನಗುತ್ತ ಕೊಂಚ ದೂರದಲ್ಲಿ ಪ್ರತ್ಯೇಕವಾಗಿ ನಿಂತಿದ್ದರು.

ಪ್ರಾರ್ಥನೆ ಮುಗಿದ ಬಳಿಕ ಮುಲ್ಲಾ ಕೋಪೋದ್ರಿಕ್ತನಾಗಿ, ''ನೀನೇಕೆ ಪ್ರಾರ್ಥನೆಯಲ್ಲಿ ಭಾಗವಹಿಸದೆ ವ್ಯರ್ಥವಾಗಿ ನಗುತ್ತಿದ್ದೀಯೆ?'' ಎಂದು ನಾನಕರನ್ನು ಕೇಳಿದನು. ಅದಕ್ಕೆ ನಾನಕರು, ''ನಾನು ಮಾತ್ರ ಪ್ರಾರ್ಥನೆ ಮಾಡುತ್ತಿರಲಿಲ್ಲ ಎಂದೇನೂ ಇಲ್ಲ; ನೀವು ತಾನೆ ಎಲ್ಲಿ ಪ್ರಾರ್ಥನೆ ಮಾಡುತ್ತಿದ್ದಿರಿ? ಇದೆಲ್ಲ ಧಾರ್ಮಿಕತೆಯ ಸೋಗು; ಅದಕ್ಕೇ ನನಗೆ ನಗೆ ಬಂದಿತು'' ಎಂದು ನೇರವಾಗಿ ಹೇಳಿದರು. ಮುಲ್ಲಾನು ತುಂಬಾ ಕೆರಳಿ, ''ಗುರುಗಳಿಗೆ ಗುರುವಾದ, ಅತ್ಯಂತ ದಯಾ ಮಯನಾದ ಭಗವಂತನ ಹೆಸರಿನಲ್ಲಿ ನಾವು ಪ್ರಾರ್ಥನೆ ಮಾಡುತ್ತಿದ್ದರೆ, ಈ ಕಾಫಿರನು 'ನೀವು ನಿಜವಾಗಿ ಪ್ರಾರ್ಥನೆ ಮಾಡುತ್ತಿಲ್ಲ, ನಿಮ್ಮಲ್ಲಿ ಪ್ರಾರ್ಥನೆಯೆಂಬುದೇ ಇಲ್ಲ' ಎಂದು ನಮ್ಮ ಪ್ರಾರ್ಥನೆಯನ್ನು ಅಣಕಿಸುತ್ತಿದ್ದಾನೆ. ಇವನನ್ನು ಕೊಲ್ಲ ಬೇಕು ಇಲ್ಲವೆ ವಿಚಾರಣೆಗೆ ಗುರಿಪಡಿಸಿ, ಮರಣದಂಡನೆ ನೀಡ ಬೇಕು'' ಎನ್ನುತ್ತ ಆಗಿಂದಾಗಲೇ ನ್ಯಾಯಾಲಯಕ್ಕೆ ದೂರಿತ್ತನು.

ಗುರುನಾನಕರು ನ್ಯಾಯಾಧೀಶರ ಮುಂದೆ ಬಂದು ನಿಂತರು. ''ಅವರು ಪ್ರಾರ್ಥನೆ ಮಾಡುವಾಗ ನೀನೇಕೆ ಸುಮ್ಮನೆ ನಗುತ್ತಿದ್ದೆ, ಅದು ಅವರನ್ನು ಅಣಕಿಸಿದಂತೆ ಆಗಲಿಲ್ಲವೆ?'' ಎಂದು ಕೇಳಿದರು. ''ಮುಲ್ಲಾ ಮತ್ತು ನವಾಬರು ಕೂಡ ಪ್ರಾರ್ಥನೆಯನ್ನೇನೂ ಮಾಡುತ್ತಿರಲಿಲ್ಲ, ಮಹಾಸ್ವಾಮಿ. ಅವ ರನ್ನು ತಾವು ನ್ಯಾಯಾಲಯಕ್ಕೆ ತಮ್ಮ ಸನ್ನಿಧಿಗೆ ಬರಮಾಡಿದರೆ ಅವರೇನು ಮಾಡುತ್ತಿದ್ದರು ಎಂಬುದನ್ನು ಹೇಳುತ್ತೇನೆ'' ಎಂದು ನಾನಕರು ಉತ್ತರಿಸಿದರು. ಒಡನೆಯೆ ನ್ಯಾಯಾಧೀಶರು ನವಾಬನನ್ನೂ ಮುಲ್ಲಾನನ್ನೂ ಬರಮಾಡಿದರು. ನಾನಕರನ್ನು ಉದ್ದೇಶಿಸಿ, ''ಈಗ ನೋಡು, ಮುಲ್ಲಾ ಬಂದಿದ್ದಾನೆ, ನವಾಬರೂ ಬಂದಿದ್ದಾರೆ, ಅವರು ಪ್ರಾರ್ಥನೆ ಮಾಡದೆ ಏನು ಮಾಡುತ್ತಿದ್ದ ರೆಂಬುದನ್ನು ಹೇಳು'' ಎಂದರು.

ಆಗ ನಾನಕರು ''ಮುಲ್ಲಾ ಅವರ ಮನೆಯಲ್ಲೊಂದು ಕುದುರೆ ಮರಿಹಾಕಿದೆ. ಇನ್ನೂ ಅದನ್ನು ಕಟ್ಟಿ ಹಾಕಿಲ್ಲ. ಸನಿಹ ದಲ್ಲೇ ಒಂದು ಬಾವಿಯಿದೆ. ಈ ಮರಿ ನೆಗೆದು ಎಲ್ಲಿಯಾದರೂ ಬಾವಿಗೆ ಬಿದ್ದರೇನು ಗತಿ ಎಂದು ಅವರು ಚಿಂತಿಸುತ್ತಿದ್ದರು. ಅಂತೆಯೇ ಅವರು ತಮ್ಮ ಮನೆಯ ಒಂದು ಕೋಳಿಮರಿಯನ್ನು ಕೂಡ ಜ್ಞಾಪಿಸಿಕೊಳ್ಳುತ್ತಿದ್ದರು. ಇನ್ನು ನವಾಬರಾದರೋ ಒಳ್ಳೆಯ ಕುದುರೆಗಳನ್ನು ಖರೀದಿಸಿ ತರಲು, ತಮ್ಮ ಸೇವಕರನ್ನು ಕಾಬೂಲಿಗೆ ಕಳುಹಿಸಿದ್ದಾರೆ. ಅವರೇಕೆ ಇದುವರೆಗೆ ಬರಲಿಲ್ಲ ಎಂದು ಚಿಂತಿಸುತ್ತಿದ್ದರು. ಸ್ವಾಮಿ, ಅವರ ಕೈಗೆ ಕುರಾನ್ ಗ್ರಂಥ ವನ್ನು ಕೊಡಿ, ಅದನ್ನು ಹಿಡಿದುಕೊಂಡು ನಾನು ಹೇಳಿದ್ದು ಸುಳ್ಳೋ ಅಥವಾ ನಿಜವೋ ಎಂಬುದನ್ನು ಹೇಳಲಿ'' ಎಂದು ಅರಿಕೆ ಮಾಡಿಕೊಂಡರು.

ನಾನಕರ ಸಿದ್ಧಿಸಾಮರ್ಥ್ಯಗಳನ್ನು ಕಂಡು ಮುಲ್ಲಾ ಮತ್ತು ನವಾಬರು ವಿಸ್ಮಯಾಭಿಭೂತರಾಗಿಬಿಟ್ಟರು. ಅಷ್ಟು ಮಾತ್ರವಲ್ಲ, ಕುರಾನನ್ನು ಗೌರವಿಸುತ್ತಿದ್ದ ಅವರಿಗೆ ಆ ಪವಿತ್ರಗ್ರಂಥವನ್ನು ಹಿಡಿದುಕೊಂಡು ಸುಳ್ಳುಹೇಳುವುದು ಸಾಧ್ಯವಾಗಲಿಲ್ಲ. 'ನಾನು ನಮ್ಮ ಮನೆಯ ಕುದುರೆ ಮರಿಯನ್ನೂ, ಕೋಳಿಮರಿಯನ್ನೂ ಕುರಿತು ಪ್ರಾರ್ಥನಾಕಾಲದಲ್ಲಿ ಸ್ಮರಿಸಿಕೊಳ್ಳುತ್ತಿದ್ದುದು ನಿಜ' ಎಂದು ಮುಲ್ಲಾ ಒಪ್ಪಿಕೊಂಡನು. 'ಕುದುರೆ ವ್ಯಾಪಾರಕ್ಕೆಂದು ನಾನು ನನ್ನ ಪರಿವಾರದವರನ್ನು ಪ್ರಾರ್ಥನಾಕಾಲದಲ್ಲಿ ನೆನಪಿಸಿ ಕೊಳ್ಳುತ್ತಿದ್ದುದು ನಿಜ' ಎಂದು ನವಾಬನೂ ಒಪ್ಪಿಕೊಂಡನು. ನಾನಕರ ಮಹಿಮಾವಿಶೇಷಗಳಿಂದ ನ್ಯಾಯಾಧೀಶರೂ ಪ್ರಭಾ ವಿತರಾದರು. ಮುಲ್ಲಾ ಮತ್ತು ನವಾಬನನ್ನು ಉದ್ದೇಶಿಸಿ, ''ಪ್ರಾರ್ಥನೆ ಮಾಡಬೇಕೆನಿಸದೆ ಇದ್ದಾಗ ಮಸೀದಿಗೆ ಹೋಗ ಬೇಡಿ. ಅಲ್ಲಿ ಈ ರೀತಿ ಅಪ್ರಾಮಾಣಿಕವಾಗಿ ವರ್ತಿಸುವುದಕ್ಕಿಂತ ಅಲ್ಲಿಗೆ ಹೋಗದೆ ಇರುವುದೇ ಮೇಲು. ಈ ಆಷಾಢಭೂತಿತನ ಬೇಡ. ಮನಸ್ಸಿನಲ್ಲಿ ಕುದುರೆವ್ಯಾಪಾರಕ್ಕೆ ಹೋದವರನ್ನೂ ಕುದುರೆಮರಿಯನ್ನೂ ಕೋಳಿಮರಿಯನ್ನೂ ಚಿಂತಿಸುತ್ತ ದಯಾ ಮಯನಾದ, ಆನಂದಮಯನಾದ ಭಗವಂತನ ಹೆಸರನ್ನು ಉಚ್ಚರಿಸಬೇಡಿ'' ಎಂದು ತಾಕೀತು ಮಾಡಿದರು.

ಆ ಬಳಿಕ ನಾನಕರನ್ನು ಕುರಿತು, ''ಮುಲ್ಲಾ ಮತ್ತು ನವಾಬರು ನಮಾಜು ಮಾಡುವಾಗ ನೀವು ನಕ್ಕುದಕ್ಕೆ ಇದ್ದ ಕಾರಣವನ್ನು ನೀವು ಹೇಳಿದ್ದೀರಿ. ದೂರುದಾರರು ಅದನ್ನು ಒಪ್ಪಿಕೊಂಡೂ ಇದ್ದಾರೆ. ನೀವಿನ್ನು ಹೋಗಬಹುದು'' ಎಂದು ನ್ಯಾಯಾಧೀಶರು ತೀರ್ಪಿತ್ತು ಅವರನ್ನು ಬಿಡುಗಡೆ ಮಾಡಿದರು.

ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುತ್ತಾರೆ; ಭೂತಗಳನ್ನು ಆರಾಧಿಸುವವರು ಭೂತಗಳನ್ನು ಪಡೆಯುತ್ತಾರೆ; ಆದರೆ ದೇವರನ್ನು ಪ್ರೀತಿಸುವವರು ದೇವರನ್ನು ಪಡೆಯು ತ್ತಾರೆ. ದೇವರನ್ನೇ ಬಿಟ್ಟು ಬೇರೆ ವಸ್ತುಗಳನ್ನು ಪ್ರೀತಿಸಿದರೆ ಅವರು ತಾವು ಪ್ರೀತಿಸಿದ ವಸ್ತುವನ್ನೇ ಪಡೆಯುತ್ತಾರೆ; ದೇವರನ್ನು ಮಾತ್ರ ಪಡೆಯಲಾಗುವುದಿಲ್ಲ. ಭಗವಂತನು ನಮ್ಮ ಎಲ್ಲ ಆಸೆಗಳನ್ನೂ ಪೂರ್ಣಗೊಳಿಸುತ್ತಾನೆ. ಸಮಾಜದಲ್ಲಿ ಒಂದು ಸ್ಥಾನವನ್ನು ಗಳಿಸಿಕೊಳ್ಳಬೇಕೆಂದು ಬಯಸಿದರೆ ನಮಗದು ದೊರೆಯುತ್ತದೆ. ನಾವು ಬಯಸಿದ ಧಾರ್ಮಿಕ ಪಂಥದಲ್ಲಿ ಇದ್ದುಕೊಂಡಿರಬಹುದು. ದೇವಾಲಯಗಳು, ಚರ್ಚುಗಳು, ಧಾರ್ಮಿಕ ಸಂಘಸಂಸ್ಥೆಗಳು – ಇಷ್ಟೇ ನಮಗೆ ಸಾಕು ಎಂಬ ಮಕ್ಕಳಾಟದಲ್ಲಿ ಮುಳುಗಿದರೆ, ಅದರಲ್ಲಿಯೇ ನಾವು ಕೊನೆಯವರೆಗೂ ಇರಬೇಕಾಗುತ್ತದೆ; ದೇವರನ್ನು